



# ಮೋಹಕ ಕಿರೀಟದ ಗೌರ ವಿಕ್ಟೋರಿಯಾ

■ ಚಿತ್ರ– ಬರಹ: **ಸಂತೋಷ್ ರಾವ್ ಪೆರ್ಮುಡ**

ಶಾಂತಿ, ಪ್ರೇಮ ಸಂಕೇತದ ಜೊತೆ ಸಂಪರ್ಕ ಸೇತುವಾಗಿ ಕೆಲಸ ಮಾಡುವ ಪಾರಿವಾಳಗಳಲ್ಲಿ ಹಲವಾರು ತಳಿಗಳಿವೆ. ಅವುಗಳ ಪೈಕಿ ತನ್ನ ಆಕರ್ಷಕ ನೋಟದಿಂದಲೇ ಎಲ್ಲರ ಗಮನ ಸೆಳೆಯುವ ಪಾರಿವಾಳ ವಿಕ್ಟೋರಿಯಾ ಕ್ರೌನ್ಡ್ ಪಿಜನ್. ಇದನ್ನು ಗೌರ ವಿಕ್ಟೋರಿಯಾ ಎಂದೂ ಕರೆಯುತ್ತಾರೆ.

ಗಾತ್ರದಲ್ಲಿ ಸಾಮಾನ್ಯ ಪಾರಿವಾಳಕ್ಕಿಂತ ದೊಡ್ಡದಾಗಿದ್ದು ಗಾಢ ನೀಲಿ ಮಿಶ್ರಿತ ಬೂದು ಬಣ್ಣದಿಂದ ಕೂಡಿರುತ್ತದೆ. ಇದರ ಎದೆಯ ಮುಂಭಾಗ ಕೆಂಪು ಬಣ್ಣದ ಪುಕ್ಕದಿಂದ ಕೂಡಿದ್ದು, ಕಣ್ಣುಗಳು ಗಾಢ ಕೆಂಪು. ಇದರ ಜುಟ್ಟು (ಶಿಖೆ) ಅತ್ಯಂತ ವಿಶಿಷ್ಟವಾಗಿದ್ದು ಸೊಗಸಾಗಿ ಉಲ್ಲನ್‌ನಿಂದ ಹೆಣೆದ ಕಸೂತಿಯಂತೆ ಭಾಸವಾಗುತ್ತದೆ. ಜುಟ್ಟು ನೋಡುವುದೇ ಖುಷಿ. ಜುಟ್ಟಿನ ಪುಕ್ಕಗಳು ಒಂದಕ್ಕೊಂದು ಬೆಸೆದು ಕೊಂಡಿರುವ ರೀತಿ ಎಂತಹ ಕಲಾಕಾರನ ಕಲೆಗೂ ಕಮ್ಮಿಯಿಲ್ಲ ಎಂಬಂತಿದೆ.

ಈ ದೊಡ್ಡ ಗಾತ್ರದ ವಿಕ್ಟೋರಿಯಾ ಕ್ರೌನ್ಡ್ ಪಿಜನ್‌ಗಳು ನೆಲದಲ್ಲೇ ವಾಸಿಸುತ್ತವೆ. ಇವುಗಳ ಮೂಲ ಸ್ಥಾನ ನ್ಯುಗಿನಿಯಾ ದ್ವೀಪ ಪ್ರದೇಶಗಳೆಂದು ಹೇಳಲಾಗಿದೆ. ಸಾಮಾನ್ಯವಾಗಿ ಈ ಪಿಜನ್‌ಗಳು 30 ರಿಂದ 35 ಇಂಚು ಉದ್ದದವರೆಗೂ ಬೆಳೆಯಬಲ್ಲವಾಗಿದ್ದು, 3 ರಿಂದ 3.5 ಕೆ.ಜಿ ತೂಗುತ್ತವೆ. ಇವುಗಳನ್ನು ಪ್ರಪಂಚದಲ್ಲಿ ಜೀವಂತವಾಗಿ ಉಳಿದಿರುವ ಪಾರಿವಾಳಗಳ ಪೈಕಿ ಅತ್ಯಂತ ದೊಡ್ಡ ಪಾರಿವಾಳಗಳೆಂದು ಪರಿಗಣಿಸಲಾಗಿದೆ.

ಇವುಗಳು ಹಾರಾಡುವಾಗ ಜೋರಾಗಿ ಚಪ್ಪಾಳೆ ತಟ್ಟಿದಂತಹ ಸದ್ದು ಕೇಳಿಸುತ್ತದೆ. ಸಂಗಾತಿಯೊಂದಿಗೆ ಕೂಡುವಿಕೆಗಾಗಿ ಇವು ವಿಶಿಷ್ಟ ರೀತಿಯ ಶಬ್ದವನ್ನು ಮಾಡುತ್ತವೆ. ಇವು ರೈತಮಿತ್ರ. ಕೃಷಿ ಭೂಮಿಯಲ್ಲಿ ಸಿಗುವ ಹುಳ, ಹುಪ್ಪಟೆ ಮತ್ತು ಕೀಟಗಳನ್ನು ತಿಂದು ಬದುಕುತ್ತವೆ. ಸಮುದ್ರ ಮಟ್ಟದಲ್ಲೇ ವಾಸಿಸುತ್ತಾವಾದರೂ ಕೆಲವೊಂದು ಪಾರಿವಾಳಗಳು ವಿಶೇಷವಾಗಿ ಸಮುದ್ರ ಮಟ್ಟಕಿಂತ ಸುಮಾರು 3,000 ಅಡಿ ಎತ್ತರದ ಪರ್ವತ ಪ್ರದೇಶದಲ್ಲೂ ವಾಸಿಸುವ ಧೈರ್ಯವನ್ನು ತೋರುತ್ತವೆ.

ಹೆಣ್ಣು ಕ್ರೌನ್ಡ್ ಪಿಜನ್‌ಗಳನ್ನು ಕಂಡಾಕ್ಷಣ ಗಂಡು ಪಾರಿವಾಳಗಳು ವಿಶಿಷ್ಟವಾಗಿ ತಲೆ, ಭುಜ ಹಾಗೂ ಬಾಲವನ್ನು ಅಲ್ಲಾಡಿಸುತ್ತವೆ. ಹೆಣ್ಣು ಏಕಕಾಲಕ್ಕೆ ಒಂದೇ ಬಿಳಿ ಬಣ್ಣದ ಮೊಟ್ಟೆಯನ್ನಿಟ್ಟು 30 ದಿನ ಕಾವು ಕೊಟ್ಟು ಮರಿ ಮಾಡುತ್ತದೆ. ಮರಿಯನ್ನು ಸುಮಾರು 13 ತಿಂಗಳ ಕಾಲ ಜೋಪಾನದಿಂದ ನೋಡಿಕೊಳ್ಳುತ್ತದೆ. ಮಾಂಸಕ್ಕಾಗಿ ಅತಿ ಹೆಚ್ಚಾಗಿ ಬೇಟೆಯಾಡುತ್ತಿರುವುದರಿಂದ ಕ್ರೌನ್ಡ್ ಪಿಜನ್‌ಗಳು ಅಳಿವಿನಂಚಿನಲ್ಲಿವೆ.